ಶ್ರೀ ಜಿ. ರಾಜೂಗೌಡ.—ಕೆಲವೊಮ್ಮೆ ಖಾಸಗಿ ಮಾಲೀಕರ ಪ್ರಭಾವಕ್ಕೆ ಒಳಗಾಗಿ ಕೆ.ಎಸ್.ಐ.ಸಿ. ಸಿಲ್ಕ್ ಪರ್ಚೇಸ್ ಮಾಡುವುದರಲ್ಲಿ ಮಂದಗತಿಯಿಂದ ಕೆಲಸ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವೈ.ಕೆ. ರಾಮಯ್ಯ.—ಈ ಪ್ರಶ್ನೆ ಉದ್ಭವಿಸುವುದಿಲ್ಲ, ಕಚ್ಚಾ ವಸ್ತುಗಳನ್ನು ಖರೀದಿ ಮಾಡುವುದು ಅದರ ಆವಶ್ಯಕತೆಯನ್ನು ಅವಲಂಬಿಸಿರುತ್ತದೆ. ಈಗ ನವಂಬರ್ ೫೦೦ ಟನ್ ಬೇಕು ಎಂದರೆ ಅದನ್ನು ಲಿಂಕೇಜ್ ಸಿಸ್ಟಂನಿಂದ ಎಷ್ಟು ಬರುತ್ತದೋ ಅಷ್ಟು ಕೊಂಡುಕೊಳ್ಳುತ್ತೇವೆ. ಉಳಿದಿದ್ದನ್ನು ನೇರವಾಗಿ ಕೊಂಡುಕೊಳ್ಳುತ್ತೇವೆ. ಚನ್ನಪಟ್ಟಣದಲ್ಲಿರುವ ಸ್ಪನ್ ಸಿಲ್ಕ್ ಮಿಲ್ಲಿನ ಇನ್‌ಸ್ಟಾಲ್ಡ್ ಕೆಪಾಸಿಟಿ ಎಷ್ಟಿದೆಯೋ, ಉತ್ಪಾದನೆ ಮಾಡುವುದಕ್ಕೆ ಶಕ್ತಿ ಎಷ್ಟಿದೆಯೋ ಅಷ್ಟನ್ನೂ ಸಂಪೂರ್ಣವಾಗಿ ಕೊಂಡುಕೊಳ್ಳುತ್ತಿದ್ದೇವೆ. ಇದರಲ್ಲಿ ಯಾವುದೇ ವಿದವಾದ ಕೈವಾಡವಾಗಲೀ, ಪ್ರಭಾವವಾಗಲೀ ಇಲ್ಲ.

ಸಣ್ಣ ಪಂತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ ಅನ್ವಯ ಹಾಸನ ನಗರಸಭೆಗೆ ಹಣ ಬಿಡುಗಡೆ ಮಾಡುವ ಬಗ್ಗೆ

೧೦೬೯. ಶ್ರೀ ಬಿ. ವಿ. ಕರೀಗೌಡ (ಹಾಸನ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ನಗರಕ್ಕೆ ಐ.ಯು.ಡಿ.ಪಿ.ಯವರು ೨೦ ಲಕ್ಷ ರೂಪಾಯಿಗಳು ಹಣ ಕೊಟ್ಟದ್ದು ಮತ್ತು ಅದರಲ್ಲಿ ೪೮ ಲಕ್ಷ ರೂಪಾಯಿಗಳು ಖರ್ಚಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಹಣವನ್ನು ಅಂಗಡಿ ಮಳಿಗೆ ಕಟ್ಟಲು ಪಂತ್ತು ಹೊಸದಾಗಿ ಉಣಸಿನ ಕೆರೆ ಬಡಾವಣೆ ಮಾಡಲು ಖರ್ಚು ಮಾಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಹಣವನ್ನು ದುರುಪಯೋಗಪಡಿಸಿರುವುದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರಕಾರದವರು ಕ್ರಮ ತೆಗೆದುಕೊಳ್ಳುವರೆ ಮತ್ತು ಇದರ ಬಗ್ಗೆ ಸರಕಾರದವರ ನಿಲುವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹಾಸನ ನಗರದ ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ಐಯುಡಿಪಿ ಯೋಜನೆಯಲ್ಲಿ ೮೨.೫೯ ಲಕ್ಷ ರೂಪಾಯಿಗಳು ಮಂಜೂರಾಗಿದೆ. ಇದರಲ್ಲಿ ಇದುವರೆವಿಗೆ ೬೪ ಲಕ್ಷ ರೂಪಾಯಿಗಳನ್ನು ಹಾಸನ ನಗರ ಸಭೆಗೆ ಬಿಡುಗಡೆ ಮಾಡಲಾಗಿದೆ, ಅದರಲ್ಲಿ ಜೂನ್ ೧೯೮೫ರ ಕೊನೆಯವರೆಗೆ ೪೫.೭೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

ಆ) ಹೌದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ವಿ ಕರೀಗೌಡ.—ಅಧ್ಯಕ್ಷರೆ "ಈಗಾಗಲೇ ನಾವು ೬೪ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ, ಆದರಲ್ಲಿ ೪೫ ಲಕ್ಷ ೭೫ ಸಾವಿರ ರೂಪಾಯಿ ಖರ್ಚಾಗಿದೆ" ಎಂದು ಹೇಳಿದ್ದಾರೆ. ನಿಜ. ಅಲ್ಲಿ ಒಂದು ಉಣಸಿನಗೆರೆ ಲೇಔಟ್ ಎಂದು ಮಾಡಿದ್ದಾರೆ. ಅಲ್ಲಿ ಒಂದು ಡ್ರೈನೇಜ್ ಸಹ ಇಲ್ಲ. ರಸ್ತೆಯೂ ಇಲ್ಲ. ಎಲ್ಲಾ ಹಾಳಾಗಿಹೋಗಿದೆ. ಕೆಲಸಗಳು ಯಾವುದೂ ಪೂರ್ತಿಯಾಗಿಲ್ಲ. ಜೊತೆಗೆ ಮ್ಯಾರ್ಕೆಟ್ ಕಾಂಪ್ಲೆಕ್ಸ್ ಮಾಡಿದ್ದಾರೆ. ಅಲ್ಲಿ ೮೦ ಅಂಗಡಿ ಮಳಿಗೆಗಳಿವೆ. ಆದು ಹಳ್ಳದಲ್ಲಿ ಕನ್‌ಸ್ಟ್ರಕ್ಷನ್ ಆಗಿದೆ. ಈಗಲೇ ಅದರ ಫೌಂಡೇಷನ್ ಕ್ರಾಕ್ ಆಗಿವೆ. ಅಂಗಡಿ ಮಳಿಗೆಗಳು ನಾಲ್ಕೈದು ವರ್ಷ ಕೂಡ ಇರುತ್ತದೋ ಇಲ್ಲವೋ ಗೊತ್ತಿಲ್ಲ. ಗುಣಮಟ್ಟವಂತೂ ನೋಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಇನ್‌ಸ್ಪೆಕ್ಷನ್ ಮಾಡಿದ್ದಾರೆಯೇ ? ಗುಣಮಟ್ಟ ತಿಳಿದುಕೊಂಡಿದ್ದಾರೆಯೇ ? ಎಂದು ನಾನು ಪ್ರಶ್ನೆ ಹಾಕಿದ್ದೆ. ಅಲ್ಲಿ ಅಂಗಡಿ ಮಾಡುವುದಕ್ಕಾಗುವುದಿಲ್ಲ. ಲೇ ಔಟ್‌ನಲ್ಲಿ ಜನ ವಾಸ ಮಾಡುವುದಕ್ಕಾಗುವುದಿಲ್ಲ. ಡ್ರೈನೇಜ್ ಅಲ್ಲಿ ಬಿದ್ದು ಹೋಗಿದೆ. ಲಾರಿ, ಕಾರು ಮತ್ತು ಬಸ್‌ನಲ್ಲಿ ಅಲ್ಲಿ ಹೋಗುವುದಕ್ಕಾಗುವುದಿಲ್ಲ. ಇದೆಲ್ಲಾ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ನಾನು ಹಾಸನ ಟೌನ್‌ನಲ್ಲಿ ಇದ್ದೆ. ಸನ್ಮಾನ್ಯ ಕರೀಗೌಡರು ನನಗೆ ಹೇಳಿದರೆ ಆ ಜಾಗ ಅವತ್ತೇ ನೋಡುತ್ತಿದ್ದೆ. ನಾನು ಒಂದು ದಿನ ಪೂರ್ತಿ ಅಲ್ಲಿದ್ದೆ. ನಾನು ಆದನ್ನು ನೋಡಿಲ್ಲ. ಅಲ್ಲಿ ಅದಕ್ಕೆ ಹಣ ಖರ್ಚು ಮಾಡಿರುವುದು ಐ.ಯು.ಡಿ.ಪಿ. ಕಾರ್ಯಕ್ರಮದ ಪ್ರಕಾರ ಇದೆ ಎಂದು ಕಾಣುತ್ತದೆ. Land Acquisition, Development and improvement of roads, traffic and transportation, construction of Mandis and markets, Industrial sheds and low cost sanitation ಇತ್ಯಾದಿ ಈ ನಾಲ್ಕೈದು ಐಟಂಗಳಿಗೆ ಐ.ಯು.ಡಿ.ಪಿ ಯಲ್ಲಿ ಹಣ ಖರ್ಚು ಮಾಡಬಹುದೆಂದು ಕೇಂದ್ರ ಸರ್ಕಾರದವರು ಕೊಟ್ಟಿರುವ ಸೂಚನೆ ಪ್ರಕಾರ ಹಣ ಖರ್ಚು ಮಾಡಿದ ಹಾಗೆ ಕಾಣಿಸುತ್ತದೆ. ಆದರೆ ಅಲ್ಲಿ ನಡೆದಿರತಕ್ಕ ಕೆಲಸದ ಗುಣಮಟ್ಟ ಕಡಿಮೆ ಎಂದು ಸನ್ಮಾನ್ಯ ಕರೀಗೌಡರು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಒಂದು ವರದಿ ತರಿಸುತ್ತೇನೆ. ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ.ವಿ. ಕರೀಗೌಡ.—ಅಲ್ಲಿ ಏನಾಗಿದೆಯೆಂದರೆ ೮೦ ಅಂಗಡಿ ಮಳಿಗೆಗಳಿಗೆ ರೋಲಿಂಗ್ ಷಟರ್ಸ್ ಹಾಕಿದ್ದಾರೆ. ಕಾನೂನು ಪ್ರಕಾರ ೧೮ ಗೇಜ್ ಇರಬೇಕು. ಆದರೆ ಅದು ೨೪-೨೫ಕ್ಕೆ ಹೋಗಿದೆಯೋ ಏನೋ ಗೊತ್ತಿಲ್ಲ. ಮುಟ್ಟಿದರೆ ಅಲ್ಲಾಡುತ್ತಿದೆ. ಜೊತೆಗೆ ಕಾಂಪ್ಲೆಕ್ಸ್ ನೋಡುವುದಕ್ಕೆ ಕ್ಯಾಗುವುದಿಲ್ಲ. ಫೌಂಡೇಷನ್ ಕ್ರಾಕ್ ಆಗಿದೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು, ಕಮೀಷನರ್ ಕೌನ್ಸಿಲರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ನಾನು ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಆದನ್ನು ಸಿ.ಓ.ಡಿ.ಗೆ ಏತಕ್ಕೆ ರೆಫರ್ ಮಾಡಬಾರದು ? ಅಥವಾ ನ್ಯಾಯಾಂಗ ತನಿಖೆ ಏತಕ್ಕೆ ಮಾಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಗುಣಮಟ್ಟ ಕಡಿಮೆ ಇದೆ ಎಂದು ಹೇಳಿದ್ದಾರೆ. ವರದಿ ತರಿಸಿಕೊಂಡ ನಂತರ ಮುಂದಿನ ಕ್ರಮ ಜರುಗಿಸುವುದಕ್ಕೆ ಯೋಚನೆ ಮಾಡುತ್ತೇನೆ.

ಶ್ರೀ ಬಿ. ವಿ. ಕರೀಗೌಡ.—ವರದಿ ಕೊಡುತ್ತಾರೆ. ಇಲ್ಲಿ ಕೊಟ್ಟಹಾಗೇ ಸರಿಯಾಗಿದೆ ಎಂದು ಕೊಡುತ್ತಾರೆ. ಸಿ.ಓ.ಡಿ.ಗೆ ರೆಫರ್ ಮಾಡುವುದಕ್ಕೆ ಏನು ತೊಂದರೆಯಿದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಿ.ಓ.ಡಿ.ಗೆ ಕೊಡಬೇಕು ಎಂದೂ ಹೇಳುತ್ತಿಲ್ಲ. ಕೊಡಬಾರದು ಎಂದೂ ಹೇಳುತ್ತಿಲ್ಲ ಪೂರ್ವಭಾವಿಯಾಗಿ ಮುನಿಸಿಪಾಲಿಟಿಯಿಂದ ವರದಿ ತರಿಸಿಕೊಂಡನಂತರ ಲೋಪ ಕಂಡುಬಂದರೆ, ತನಿಖೆ ಆವಶ್ಯಕತೆ ಇದೆ ಎಂದು ಕಂಡುಬಂದರೆ ಮುಂದಿನ ಕ್ರಮ ಜರುಗಿಸುತ್ತೇನೆ ಎಂದೂ ಹೇಳಿದ್ದೇನೆ. ಮಾನ್ಯ ಸದಸ್ಯರು ಈ ಬಗ್ಗೆ ಸಂಶಯ ಪಡಬೇಕಾಗಿಲ್ಲ.

ಶ್ರೀ ಬಿ. ವಿ. ಕರೀಗೌಡ.—ಒಂದು ಡ್ರೈನೇಜ್ ಕೂಡ ಅಲ್ಲಿಲ್ಲ.

ಅಧ್ಯಕ್ಷರು.—ಕರೀಗೌಡರೆ, ಮಂತ್ರಿಗಳ ಪಕ್ಕದಲ್ಲಿ ಕೂತು ಡಿಸ್‌ಕಸ್ ಮಾಡಿ. ಪ್ರತಾಪಚಂದ್ರ ಶೆಟ್ಟಿಯವರೆ, ತಮ್ಮ ಪ್ರಶ್ನೆಯನ್ನು ೧೨-೯-೮೫ಕ್ಕೆ ಹಾಕಿದ್ದೇನೆ,

ಮದ್ದೂರು ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಬವಣೆ ಬಗ್ಗೆ

೧೨೦೪. ಶ್ರೀ ಬಿ. ಅಪ್ಪಾಜಿಗೌಡ (ಮದ್ದೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಮದ್ದೂರು ಪಟ್ಟಣವಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಶಾಶ್ವತ ಪರಿಹಾರಕ್ಕಾಗಿ ಕ್ರಮಕೈಗೊಂಡಿದ್ದಾರೆಯೇ?

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು?